# <u>ಗುಮ್ಮನೆಲ್ಲಿಹ ತೋರಮ್ಮ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 43
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 219
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 154
4. **Note:** Lyrics mentioned without highlights are as per Ref. 1. The wordings given in green highlights are as per Ref. 2. These wordings are slightly different. Hence, they are given separately in green highlights. The wordings in Ref. 3 are a mix of Ref. 1 & Ref. 2.
5. **Note:** Singer has followed lyrics as in Ref. 1.

ರಾಗ: ತೋಡಿ ತಾಳ: ಅಟ

ಗುಮ್ಮನೆಲ್ಲಿಹ ತೋರಮ್ಮ ನಮ್ಮಮ್ಮ
ಸುಮ್ಮನಂಜಿಸಬೇಡಮ್ಮ ॥ ಪ ॥

ಪಂಚಾಶತ್ಕೋಟಿ ವಿಸ್ತೀರ್ಣದ ಭೂಮಿಯ
ವಂಚನೆಯಿಲ್ಲದೆ ತಿರುಗಿ ಬಂದೆನೆ ನಾನು
ಹಂಚಿಸಿಕೊಟ್ಟೆನೆ ಅವರವರಿಗೆ ನಾ
ಅಂತು ನೋಡಿದರೂ ಕಾಣೆನೆ ಗುಮ್ಮನ ॥ 1 ॥

ಈರೇಳು ಲೋಕವನುದರದೊಳಗೆ ಇಟ್ಟು
ತೋರಿದೆ ಬ್ರಹ್ಮಾಂಡ ಬಾಯೊಳಗೆ
ಘೋರ ರೂಪದಿ ಬಂದ ಗಾಳಿಯಸುರನ ಕೊಂದೆ
ಅಲ್ಲಿ ನೋಡಿದರೂ ಕಾಣೆನೆ ಗುಮ್ಮನ ॥ 2 ॥

ಕಾಳಿಯ ಮಡು ಧುಮುಕಿ ಕಾಳಿಂಗನ ಹೆಡೆ ತುಳಿದು

ಮೇಲೆ ನಾಟ್ಯಂಗಳ ನಾನಾಡುತಲಿದ್ದ
ಒಲೆಯ ಭಾಗ್ಯವನಿತ್ತ ನಾಗಪತ್ನಿಯರಿಗೆ
ಅಲ್ಲಿ ನೋಡಿದರೂ ಕಾಣೆನೆ ಗುಮ್ಮನ ॥ 3 ॥

ಅಕ್ರೂರನಿಗೆ ವಿಶ್ವರೂಪವ ತೋರಿದೆ
ಘಕ್ಕನೆ ರಥವೇರಿ ಮಥುರೆಗೆ ಪೋದೆ
ಸೊಕ್ಕಿದ ರಜಕನ ಕೊಂದು ಮಡಿಯನುಟ್ಟೆ
ಹೊಕ್ಕು ನೋಡಿದರೂ ಕಾಣೆನೆ ಗುಮ್ಮನ ॥ 4 ॥

ಬಿಲ್ಲು ಹಬ್ಬಕೆ ಹೋಗಿ ಮಲ್ಲರ ಮಡುಹಿದೆ
ಅಲ್ಲಿ ಮಾವನ ಕೊಂದು ಮುತ್ತಯ್ಯಗೊಲಿದೆ
ಚೆಲ್ವಗೋಪಾಲ ಶ್ರೀ ಪುರಂದರ ವಿಠಲನ
ಸೊಲ್ಲು-ಸೊಲ್ಲಿಗೆ ನೀ ಬೆದರಿಸ ಬೇಡಮ್ಮ ॥ 5 ॥

**Note:** The below given lyrics are as per Ref. 2 mentioned above.

ರಾಗ: ತೋಡಿ ತಾಳ: ಆದಿ

ಗುಮ್ಮನೆಲ್ಲಿಹ ತೋರಮ್ಮ
ಸುಮ್ಮನಂಜಿಸಬೇಡಮ್ಮ || ಪ ||

ಪಂಚಾಶತ್ಕೋಟಿ ವಿಸ್ತೀರ್ಣದ ಭೂಮಿಯ
ವಂಚನೆಯಿಲ್ಲದೆ ತಿರುಗಿ ಬಂದೆನೆ ನಾನು
ಹಂಚಿಸಿ ಕೊಟ್ಟೆನೆ ಅವರವರಿಗೆ ನಾ
ಹಾಂಗು ನೋಡಿದರು ಕಾಣೆನೆ ಗುಮ್ಮನ || ಅಪ ||

ಸಿಂಧುವಿನೊಳಗೆ ಆನಂದದಿ ಮಲಗಿದ್ದೆ
ಒಂದು ನಾಭಿಕಮಲದಿ ಬೊಮ್ಮನ ಪುಟ್ಟಿಸಿದೆ
ಅಂಧಕಾರದಿ ಪೋಗಿ ಒಬ್ಬನೆ ಮಲಗಿದೆ
ಹಾಂಗು ನೋಡಿದರು ಕಾಣೆನೆ ಗುಮ್ಮನ || 1 ||

ಈರೇಳು ಲೋಕವ ಉದರದೊಳಗೆ ಇಟ್ಟು

ತೋರಿದೆ ಬ್ರಹ್ಮಾಂಡವ ಬಾಯಲಿ ನಾನು
ಘೋರ ರೂಪದಿ ಬಂದ ಗಾಳಿ ಅಸುರನ ಕೊಂದೆ
ಹಾಂಗು ನೋಡಿದರು ಕಾಣೆನೆ ಗುಮ್ಮನ || 2 ||

ಕಾಳಿಯ ಮಡು ಧುಮುಕಿ ಕಾಳಿಂಗನ ಹೆಡೆ ತುಳಿದು
ಮೇಲೆ ನಾನಾವಿಧ ನಾಟ್ಯವಾಡುತಲಿದ್ದೆ
ಒಲಿದು ಭಾಗ್ಯವನಿತ್ತೆ ನಾಗಪತ್ನಿಯರಿಗೆ
ಹಾಂಗು ನೋಡಿದರು ಕಾಣೆನೆ ಗುಮ್ಮನ || 3 ||

ಅಕ್ರೂರಗೆ ವಿಶ್ವರೂಪವ ತೋರಿದೆ
ಘಕ್ಕನೆ ರಥವೇರಿ ಮಧುರೆಗೆ ಪೋದೆ
ಸೊಕ್ಕಿದ ರಜಕನ ಕೊಂದು ಮಡಿಯನುಟ್ಟೆ
ಹಾಂಗು ನೋಡಿದರು ಕಾಣೆನೆ ಗುಮ್ಮನ || 4 ||

ಬಿಲ್ಲುಹಬ್ಬಕೆ ಪೋಗಿ ಮಲ್ಲರ ಮಡುಹಿದೆ
ಅಲ್ಲಿ ಮಾವನ ಕೊಂದು ಮುತ್ಯಗೆ ಒಲಿದೆ
ಚೆಲ್ವ ಗೋಪಾಲ ಶ್ರೀ ಪುರಂದರ ವಿಠಲನ
ಬಾರಿ ಬಾರಿಗೆ ನೀ ಬೆದರಿಸಬೇಡಮ್ಮ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಗುಮ್ಮ** – ಗುರ್ವ, ಬೆದರಿಸುವ ದೆವ್ವ.

**ಪಂಚಾಶತ್‌ಕೋಟಿ ವಿಸ್ತೀರ್ಣದ ಭೂಮಿ** – ಭೂಮಿಯ ಹರವು ಐವತ್ತು ಕೋಟಿ ಯೋಜನಗಳೆಂದು ಪುರಾಣದ ಒಕ್ಕಣೆ.

**ಹಂಚಿಸಿ ಕೊಟ್ಟೆನೆ** – ಪಾಲು ಮಾಡಿ ಕೊಡುತ್ತೇನೆ

**ಈರೇಳು ಲೋಕವ** – ಹದಿನಾಲ್ಕು ಲೋಕಗಳನ್ನು.

**ಗಾಳಿ ಅಸುರನ** – ತೃಣಾವರ್ತನೆಂಬ ಅಸುರನು ಕೃಷ್ಣನನ್ನು ಕೊಲ್ಲಲು ಬಿರುಗಾಳಿಯಂತೆ ಬಂದು ಎತ್ತಿಕೊಂಡು ಹೋಗಲು, ಕೃಷ್ಣನು ಅವನನ್ನು ಕೊಂದ ಸಂದರ್ಭ.

**ಅಕ್ರೂರಗೆ...** – ಕಂಸನ ಅಣತಿಯಂತೆ ಕೃಷ್ಣನನ್ನು ಗೋಕುಲದಿಂದ ಮಥುರೆಗೆ ಕೊಂಡೊಯ್ಯುತ್ತಿರುವಾಗ ಯಮುನಾನದಿಯಲ್ಲಿ ಅಕ್ರೂರನಿಗೆ ಕೃಷ್ಣನು ತನ್ನ ದಿವ್ಯರೂಪವನ್ನು ತೋರಿಸಿದ ಸಂದರ್ಭ.

**ಸೊಕ್ಕಿದ ರಜಕ** – ದಾರಿಯಲ್ಲಿ ಸಿಕ್ಕಿ ಕಂಸನ ಮಡಿವಾಳ (ಅಗಸ). ಮಥುರೆಗೆ ಹೋದ ಬಳಿಕ ಶ್ರೀ ಕೃಷ್ಣನು ಅರಮನೆಯ ಅಗಸನನ್ನು ಅವನು ಒಗೆದ ಬಟ್ಟೆಗಳನ್ನು ಬೇಡಿದನು. ಅವನು ಕೊಡದೆ ಸೊಕ್ಕಿನ ಮಾತುಗಳನ್ನಾಡಲು, ಅವನನ್ನು ಕೊಂದು ತಾನೂ ತೆಗೆದುಕೊಂಡು, ಗೋಪಾಲಕರಲ್ಲಿ ಹಂಚಿದ.

**ಬಿಲ್ಲು ಹಬ್ಬಕ್ಕೆ...** – ಮಥುರೆಯಲ್ಲಿ ನಡೆಯುತ್ತಿದ್ದ ನಾಡಹಬ್ಬ; ಇದನ್ನು ನೆವಮಾಡಿ ಕೊಂಡೇ ಕಂಸನು ಕೃಷ್ಣನನ್ನು ಮಥುರೆಗೆ ಕರೆಸಿಕೊಂಡದ್ದು.

**ಮಾವನ** – ಕಂಸನನ್ನು.

**ಮುತ್ಯಗೆ** – ತಾತನಿಗೆ, ದೇವಕಿಯ ತಂದೆಯಾದ ಉಗ್ರಸೇನನಿಗೆ.

**Classification:** Keerthane
**Ankita:** sri purandara vittala
**Location:** NA
**Category:** Krishna Leele
**Sub-Category:** gumma, bhaya, bhumi, Samudra, padma, brahma, loka, udara, brahmanda, bayi, asura, kalinga, Bhagya, akrura, vishwaroopa, ratha, billu, kamsa, Gopala, Krishna,
**Pravachana:** NA
**Explanation:** NA